ದಿನಾಂಕಃ **08-01-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು ಃ ವಾದಿ ಪರ ವಕೀಲರಾದ ಶ್ರೀ ಆರ್.ಎಸ್.ಕೆ.ರವರಿಂದ ಃ</u>

**1.** ನಾನು ಗಾರೆ ಕೆಲಸ ಮಾಡುತ್ತೇನೆ. ನಾನು ದ್ವಿತೀಯ ಪಿ.ಯು.ಸಿ. ವರೆಗೂ ಓದಿದ್ದೇನೆ. ಯಾವುದೇ ದಾಖಲೆಗೆ ಸಹಿ ಮಾಡುವ ಮೊದಲು ಅದನ್ನು ಓದಿ ತಿಳಿದುಕೊಂಡು ಸಹಿ ಹಾಕಬೇಕು ಎಂದರೆ ಸರಿ. ದಿಃ 27.06.2016 ರಂದು ನಿಪಿ-1 ರಂತೆ ಆಗಿರುವ ಕ್ರಯದ ಕರಾರಿನಲ್ಲಿ ನನ್ನ ಸಹಿ ಇದೆ. ಮೀನಾಕ್ಷಿ ನನ್ನ ತಾಯಿ, ಮಣಿಕಂಠ ನನ್ನ ಅಣ್ಣ. ಅವರುಗಳು ಸಹ ನಿಪಿ-1 ರಲ್ಲಿ ಸಹಿ ಹಾಕಿದ್ದಾರೆ. ವಾದಿ ನನಗೆ ಪರಿಚಯವಿಲ್ಲ, ಅವರ ತಾಯಿ ಜಯಲಕ್ಷ್ಮೀರವರು ನನಗೆ ಗೊತ್ತು. ದಿಃ 27.06.2016 ರಂದು ವಾದಿಗೆ ನಾನು, ನನ್ನ ತಾಯಿ ಮತ್ತು ನನ್ನ ಅಣ್ಣ ದಾವಾ ಸ್ವತ್ತನ್ನು ಮಾರಾಟ ಮಾಡುವುದಾಗಿ ಕ್ರಯದ ಕರಾರನ್ನು ಬರೆದುಕೊಟ್ಟಿದ್ದೇವೆ ಎಂದರೆ ಸರಿ. ಸಾಕ್ಷಿಯು ನನ್ನ ಅಕ್ಕನ ಮದುವೆಯ ಖರ್ಚಿಗಾಗಿ ಅವರಿಂದ ಸ್ವತ್ತನ್ನು ಅಡ ಇಟ್ಟು ಹಣವನ್ನು ಹಂತ ಹಂತವಾಗಿ ರೂ.30 ಸಾವಿರ ಒಂದು ಬಾರಿ ಮತ್ತೊಂದು ಬಾರಿ ರೂ.50 ಸಾವಿರ ಪಡೆದುಕೊಂಡಿದ್ದೇವೆ ಬಡ್ಡಿ ರೂ.20 ಸಾವಿರ ಸೇರಿಕೊಂಡು ಒಟ್ಟು ರೂ.1 ಲಕ್ಷಕ್ಕೆ ನಮ್ಮ ಸ್ವತ್ತನ್ನು ಅಡ ಇಟ್ಟಿದ್ದೇವೆ ಎಂದು ನುಡಿಯುತ್ತಾರೆ. ನಿಪಿ-1 ಕರಾರಿನ ಅಡಿ ವಾದಿಯಿಂದ ನಾವು ರೂ.1,50,000/- ವನ್ನು ಮುಂಗಡವಾಗಿ ಸಾಕ್ಷಿದಾರರ ಸಮಕ್ಷಮ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ನಂತರ ನಿಪಿ-1 ರಂತೆ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ಪತ್ರವನ್ನು ನೊಂದಣಿ ಮಾಡಿಸಿರುತ್ತೇವೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಅಂಶಗಳು ನನಗೆ ಗೊತ್ತು, ಅವು ಸತ್ಯವಿರುತ್ತವೆ. ನಾವು ವಾದಿಗೆ ಕ್ರಯ ಪತ್ರ ಮಾಡಿಕೊಡಲು ನಾವು ಬದ್ಧರಿಂದ್ದು, ಅದರಿಂದ ತಪ್ಪಿಸಿಕೊಳ್ಳಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

**(**ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು**).**

**ಓ. ಹೇ. ಕೇ. ಸ. ಇದೆ.**

**C/C 1 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,**
**ಪಾಂಡವಪುರ.**

**ಸಾಕ್ಷಿದಾರರ ಸಹಿ.**